**ದಿಃ01.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲುಃ-**ಪ್ರತಿವಾದಿ ಪರ ಶ್ರೀ. **D.P.K.,**ವಕೀಲರಿಂದಃ-

ಈ ದಾವಾ ಸಲ್ಲಿಸಲು ನಾನು ಮತ್ತು ನನ್ನ ತಾಯಿ ಮಾಹಿತಿಯನ್ನು ವಕಿಲರಿಗೆ ನೀಡಿರುತ್ತೇನೆ . ದಾವೆ ಹಾಕುವ ಸಂರ್ಬದಲ್ಲಿ ನಾವು ಹಳೇ ಮತ್ತು ಹೋಸ ಪಹಣಿ , ಮುಟೇಷನ್ ಮತ್ತು ವಂಶವೃಕ್ಷ ಇಟ್ಟುಕೊಂಡಿರುತ್ತೇವೆ . ದಾವಾ ಹಾಕುವ ಸಂದರ್ಬದಲ್ಲಿ ನಮ್ಮ ತಾಯಿಯು ಪ್ರತಿವಾದಿ 1 ರವರಿಗೆ ಬರೆದುಕೊಟ್ಟ ದಾನ ಪತ್ರವನ್ನು ನಾನು ನೋಡಿರುತ್ತೇನೆ . ಕಂದಾಯ ಇಲಾಖೆಯಲ್ಲಿ ಖಾತೆ ಬದಲಾವಣೆ ಆಗುವ ಬಗ್ಗ ಯಾವ ಪ್ರಕ್ರಿಯೆಯನ್ನು ಪಾಲಿಸುತ್ತಾರೆ ಎಂಬ ಬಗ್ಗ ನನಗೆ ತಿಳಿದಿರುವುದಿಲ್ಲ. ಪ್ರತಿವಾದಿಗಳು ಈ ದಾವೆಯಲ್ಲಿ ತಮ್ಮ ತಕರಾರು ಮತ್ತು ಹೆಚ್ಚುವರಿ ತಕರಾರು ಏನು ಸಲ್ಲಿಸಿರುತ್ತಾರೆಂದು ನಮ್ಮ ವಕೀಲರಿಂದ ಕೇಳಿ ತಿಳಿದುಕೊಂಡಿರುತ್ತೀನಿ . ಸದರಿ ತಕರಾರಿನಲ್ಲಿ ಪ್ರತಿವಾದಿ ಮತ್ತು ವಾದಿ 1 ರವರ ಜಂಟಿ ಖಾತೆ ಬದಲಾವಣೆಯಾದ ಹೇಗೆ ಆಗಿರುವ ಬಗ್ಗ ತಿಳಿಸಿರುತ್ತಾರೆ ಎಂದರೆ ಸಾಕ್ಷಿ ನಮ್ಮ ತಾಯಿಗೆ ತಿಳಿಯದ ಹಾಗೆ ಮಾಡಿಕೊಂಡಿರುತ್ತಾರೆ ಎಂದು ತಿಳಿಸಿರುತ್ತಾರೆ . ನಾನು ಪ್ರತಿವಾದಿ ಮತ್ತು ವಾದಿ 1 ರವರ ನಡುವೆ ಆದ ಜಂಟಿ ಖಾತೆಯನ್ನು ಕಂದಾಯ ಇಲಾಖೆಯಲ್ಲಿ ವಿಚಾರಿಸಿರುವುದಿಲ್ಲ ಹಾಗೂ ಎ.ಸಿ., ನ್ಯಾಯಾಲಯದಲ್ಲಿ ಪ್ರಶ್ನಿಸಿರುವುದಿಲ್ಲ . ನಿಪಿ 12 ರಲ್ಲಿ ದಾವಾ ಆಸ್ತಿಯ ಐಟಂ 2 ರ ಪಹಣಿಯಲ್ಲಿ ವಾದಿ 1 ಮತ್ತು

ಪ್ರತಿವಾದಿ 1 ರವರ ಹೆಸರಿಗೆ ಜಂಟಿ ಖಾತೆ ಇರುತ್ತದೆ ಎಂದರೆ ಸರಿ. ಅದರ ವಿಸ್ತೀರ್ಣ 01 ಎಕರೆ 34 ಗುಂಟೆ ಇರುತ್ತದೆ ಎಂದರೆ ಸರಿ. ದಾವಾ ಆಸ್ತಿ ಐಟಂ ನಂ.1 ರ ಒಟ್ಟು ವಿಸ್ತೀರ್ಣ 02 ಎಕರೆ ಇರುತ್ತದೆ . ಅದೂ ಕೂಡ ನಿಪಿ 13 ರಂತೆ ವಾದಿ 1 ಮತ್ತು ಪ್ರತಿವಾದಿ 1 ರವರ ಹೆಸರಿಗೆ ಜಂಟಿ ಖಾತೆ ಇರುತ್ತದೆ ಎಂದರೆ ಸರಿ. ಇವತ್ತಿಗೂ ಸಹ ಸದರಿ ದಾವಾ ಆಸ್ತಿಗಳ ಪಹಣಿ ಮತ್ತು ಮುಟೇಷನ್ ಪ್ರತಿವಾದಿ 1 ಮತ್ತು ವಾದಿ 1 ರವರ ಜಂಟಿ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ನನ್ನ ಮದುವೆಯಾಗಿ ಗಂಡನ ಮನೆಯಲ್ಲಿ ವಾಸ ಮಾಡುತ್ತಿದ್ದ ಕಾಲದಿಂದಲೂ ದಿದ್ದಿಗಿ ಗ್ರಾಮದಲ್ಲಿ ವಾದಿ 1 ಮತ್ತು ಪ್ರತಿವಾದಿಗಳ ನಡುವೆ ದಾವಾ ಆಸ್ತಿಗಳಿಗೆ ಸಂಬಂಧಿಸಿದ ವ್ಯವಹಾರಗಳ ಬಗ್ಗೆ ವೈಯಕ್ತಿಕವಾಗಿ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿ 1 ಮತ್ತು ಪ್ರತಿವಾದಿ 1 ನಡುವೆ ದಾವಾ ಆಸ್ತಿಯ ವಿಚಾರವಾಗಿ ನಡೆದ ವ್ಯವಹಾರದ ಸಂದರ್ಬದಲ್ಲಿ ನಾನು ಹಾಜರು ಇರಲಿಲ್ಲ ಎಂದರೆ ಸರಿಯಲ್ಲ . ನಾನು ಯಾವ ವರ್ಷದಂದು ಹಾಜರು ಇದ್ದೇ ಎಂದು ಹೇಳಲು ಈಗ ಹೇಳಲಾಗುವುದಿಲ್ಲ . ನಾನು ಹಾಜರು ಇದ್ದೇ ಎಂದು ತೋರಿಸಲು ಯಾವುದೇ ಸಾಕ್ಷಾದಾರಗಳು ನನ್ನ ಬಳಿ ಇರುವುದಿಲ್ಲ .

ನನ್ನ ಅಣ್ಣನಾದ ಬಸವರಾಜ್ ರವರು ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಅವರು ಸನ್ 2009 ರಲ್ಲಿ ರಸ್ತ ಅಪಘಾತದಲ್ಲಿ ಮೃತಪಟ್ಟಿರುತ್ತಾರೆ ಎಂದರೆ ಸರಿ. ಆಗ ನಾನು ಬೆಂಗಳೂರಿನಲ್ಲಿ ವಾಸವಿರುತ್ತೇನೆ ಎಂದರೆ ಸರಿ. ನನ್ನ ಅಣ್ಣ ತೀರಿಹೋದ ನಂತರ ಅನುಕಂಪದ ಆಧಾರದ ಮೇರೆಗೆ ಪ್ರತಿವಾದಿ 1 ರವರಿಗೆ ಸರ್ಕಾರಿ ಕೆಲಸ ಸಿಕ್ಕಿರುತ್ತದೆ ಎಂದರೆ ಸರಿ. ಸದರಿ ಅನುಕಂಪದ ಆಧಾರದ ಮೇಲೆ ಕೆಲಸ ನೀಡುವ ಸಂದರ್ಬದಲ್ಲಿಬಸವರಾಜ್ ಅವರ ನನ್ನ ತಾಯಿಯ ಅನುಮತಿಯನ್ನು ಪಡೆದಿರುತ್ತಾರೆ ಎಂದರೆ ಸರಿ. ನನಗೆ ವಾದಿ 1 ರವರು ಅನುಮತಿ ನೀಡಿದ ಮೇರೆಗೆ ಪ್ರತಿವಾದಿ1 ರವರಿಗೆ ಅನುಕಂಪದ ನೌಕರಿ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ . ಸದರಿ ಅನುಕಂಪದ ಆಧಾರದ ಮೇಲೆ ಕೆಲಸ ಪಡೆಯುವ ಸಂದರ್ಬದಲ್ಲಿ ಪ್ರತಿವಾದಿ 2 ಮತ್ತು 3 ರವರು ಚಿಕ್ಕ ವಯಸ್ಸಿನವರು ಇರುತ್ತಾರೆ ಎಂದರೆ ಸರಿ. ಬಸವರಾಜ್ ಅವರು ತೀರಿಕೊಂಡಿದ್ದರಿಂದ ಪ್ರತಿವಾದಿಗಳಿಗೆ ತುಂಬಾ ತೊಂದರೆ ಆಗಿರುತ್ತದೆ ಎಂದರೆ ಸರಿ. ಸನ್ 2010 ರಲ್ಲಿ ಪ್ರತಿವಾದಿ 1 ರವರ ತಾಯಿ ಮನೆಯವರು ಪ್ರತಿವಾದಿಗಳಿಗೆ ಅವರ ಜೀವನ ಆಧಾರಕ್ಕೆ ಏನಾದರು ವ್ಯವಸ್ಥ ಮಾಡಬೇಕೆಂದು ವಾದಿ

1 ರವರೊಡನೆ ಪಂಚಾಯತಿ ನಡೆಸಿರುವ ಬಗ್ಗೆ ನಿಮಗೆ ಗೊತ್ತು ಎಂದರ ಸಾಕ್ಷಿ ಗೊತ್ತಿಲ್ಲ ನಡೆಸಿರುವುದಿಲ್ಲ ಎಂದು ಹೇಳುತ್ತಾರೆ . ಸನ್ 2010 ರಲ್ಲಿ ಪಂಚಾಯಿತಿದಾರರು ಪ್ರತಿವಾದಿ 2 ಮತ್ತು 3 ರವರು ದೊಡ್ಡವರಾಗುವರೆಗೂ ವಾದಿ 1 ಮತ್ತು ಪ್ರತಿವಾದಿ 1 ರ ನಡುವೆ ದಾವಾ ಆಸ್ತಿಗಳು ಜಂಟಿಯಾಗಿ ಇರಬೇಕಾಗುತ್ತದೆ ಎಂದು ತೀರ್ಮಾನ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಮದುವೆಯಾದ ನಂತರ ಬೆಂಗಳೂರಿನಲ್ಲಿ ವಾಸವಿದ್ದು ನನ್ನ ಗಂಡ ಮತ್ತು ಮಕ್ಕಳ ಜವಬ್ದಾರಿಯನ್ನು ನಾನೇ ನೋಡಿಕೊಂಡಿರುತ್ತೇನೆ ಎಂದರೆ ಸರಿ. ಬೆಂಗಳೂರಿನಿಂದ ದಿದ್ದಿಗಿ ಗ್ರಾಮಕ್ಕೆ ಬರಲು 210 ಕಿ.ಮಿ. ಇರುತ್ತದೆ . ಕಾರಿನಲ್ಲಿ ಬಂದರೆ 4 ಗಂಟೆ ಆಗುತ್ತದೆ . ನಮ್ಮ ಬಳಿ ಸ್ವಂತ ವಾಹನ ಇರುತ್ತದೆ . ನಾನು ತವರು ಮನೆಯವರು ಕರೆದಾಗ ಮಾತ್ರ ಊರಿಗೆ ಬರುತ್ತಿದ್ದೆ ಎಂದರೆ ಸಾಕ್ಷಿ ವಾದಿ 1 ರವರನ್ನು ನೋಡಬೇಕಾದಾಗ ಬರುತ್ತಿದ್ದೆ ಎಂದು ಹೇಳುತ್ತಾರೆ . ನಾನು ವರ್ಷಕ್ಕೆ ಅಂದಾಜು 10- 20 ಬಾರಿ ತವರು ಮನೆಗೆ ಬರುತ್ತಾ ಇದ್ದೆ . ನಾನು ಸದರಿ 10-20 ಬಾರಿ ಬಿಟ್ಟು ಬೇರೆ ಕಾಲದಲ್ಲಿ ವಾದಿ 1 ಮತ್ತು ಪ್ರತಿವಾದಿ 1 ರವರ ನಡುವೆ ಆದ ವ್ಯವಹಾರಗಳ ಬಗ್ಗೆ ನೇರವಾಗಿ ಮಾಹಿತಿ ಇರುವುದಿಲ್ಲ ಎಂದರೆ ಸಾಕ್ಷಿ ವಾದಿ 1 ರವರು ತಿಳಿಸಿರುತ್ತಾರೆ ಎಂದು ಹೇಳುತ್ತಾರೆ . ನಿಪಿ 14 ವಂಶವೃಕ್ಷವನ್ನು ತಯಾರಿಸಲು ಮಾಹಿತಿಯನ್ನು ವಾದಿ 1 ರವರು ನೀಡಿರುತ್ತಾರೆ . ನಿಪಿ 14 ವಂಶವೃಕ್ಷದ ಸ್ಟ್ಯಾಂಪ್ ಪೇಪರ್ ಅನ್ನು ನಾನು ನನ್ನ ಹೆಸರಿನಲ್ಲಿ ಖರೀದಿ ಮಾಡಿರುತ್ತೇನೆ . ನನಗೆ ಇಂಗ್ಲೀಷ ಭಾಷೆ ಓದಲು ಬರುವುದಿಲ್ಲ . ನಿಪಿ 14 ರ ಸ್ಟ್ಯಾಂಪ್ ಪೇಪರ್ ರತ್ನಮ್ಮ ಕೋಂ ಮಲ್ಲಿಕಾರ್ಜುನಪ್ಪ ಎಂಬುವವರ ಹೆಸರಿಗೆ ಖರೀದಿ ಆಗಿರುತ್ತದೆ ಎಂದರೆ ಸರಿ . ನಿಪಿ 14 ಕ್ಕೆ ವಾದಿ 1 ರವರು ಸಹಿ ಮಾಡಿರುವುದಿಲ್ಲ ಎಂದರೆ ಸಾಕ್ಷಿ ವಾದಿ 1 ರವರಿಗೆ ಸ್ಟ್ರೋಕ್ ಆದ ಕಾರಣ ನಾನು ಮಾಡಿರುತ್ತೇನೆ ಎಂದು ಹೇಳುತ್ತಾರೆ . ವಾದಿ 1 ರವರಿಗೆ ಸ್ಟ್ರೋಕ್ ಆದ ಬಗ್ಗೆ ತೋರಿಸಲು ಈ ಪ್ರಕರಣದಲ್ಲಿ ಯಾವುದೇ ದಾಖಲೆ ತೋರಿಸಿರುವುದಿಲ್ಲ ಎಂದರೆ ಸರಿ. ನಿಪಿ 14 ದಾಖಲೆಯಲ್ಲಿ ವಂಶವೃಕ್ಷ ಪಡೆಯುವ ಉದ್ದೇಶ ಪಹಣಿ ಬದಲಾವಣೆಗೆ ಎಂದು ನಮೂದು ಇರುತ್ತದೆ ಎಂದರೆ ಸರಿ. ನಿಪಿ14 ರಲ್ಲಿ ಯಾವ ಆಸ್ತಿಗೆ , ಯಾವ ಒಡೆತನದ ಆಸ್ತಿಗೆ ಸಂಬಂದಿಸಿದ ಆಸ್ತಿಯನ್ನು ಬದಲಾವಣೆ ಮಾಡುವ ಉದ್ದೇಶದಿಂದ ಪ್ರಮಾಣ ಪತ್ರವನ್ನು ತಯಾರಿಸಿದ್ದನ್ನು ನಮೂದಿಸಿರುವುದಿಲ್ಲ ಎಂದರೆ ಸರಿ.

ನಮ್ಮ ತಂದೆಗೆ ದಾವಾ ಆಸ್ತಿಗಳು ನಮ್ಮ ತಂದೆಗೆ ಪಿರ್ತಾರ್ಜಿತವಾಗಿ ಬಂದಿರುತ್ತದೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿ ಪಹಣಿಯಲ್ಲಿ ಇರುತ್ತದೆ ಎಂದು ಹೇಳುತ್ತಾರೆ . ನಮ್ಮ ತಂದೆಗೆ ಪಾಲುವಿಭಾಗ ಮೂಲಕ ಬಂದಿರುವ ಬಗ್ಗೆ ತೋರಿಸಲು ನೊಂದಾಯಿತ ಪತ್ರಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿ ನಮ್ಮ ಅಜ್ಜನಿಂದ ನಮ್ಮ ತಂದೆಗೆ ಪಿರ್ತಾರ್ಜಿತವಾಗಿ ಬಂದಿರುತ್ತದೆ ಎಂದು ಹೇಳುತ್ತಾರೆ . ನಮ್ಮ ಅಜ್ಜನಾದ ನಿಂಗಪ್ಪರವರಿಗೆ ಇಬ್ಬರು ಹೆಂಡತಿಯರು, ಮೊದಲನೆಯವರು ಮಹಾದೇವಮ್ಮ ಅವರಿಗೆ 04 ಜನ ಮಕ್ಕಳರು ಅವರು ಬಸವನಗೌಡಪ್ಪ , ಮಲ್ಲಿಕಾರ್ಜುನಪ್ಪ , ಸಿದ್ದಮ್ಮ ಮತ್ತು ಬಸಮ್ಮ ಇರುತ್ತಾರೆ . ಎರಡನೇ ಹೆಂಡತಿ ಹೆಸರು ಬಸಮ್ಮ ಇರುತ್ತದೆ ಅವರಿಗೆ 7 ಜನ ಮಕ್ಕಳು ಅವರು ಚನ್ನಬಸಪ್ಪ , ಕುಬೇರಪ್ಪ , ಜ್ಯೋತಿಗೌಡ , ಸುಮಂಗಲಮ್ಮ , ಮಹಾದೇವಮ್ಮ , ನಿರ್ಮಲಮ್ಮ ಮತ್ತು ನಿಂಬಕ್ಕ ಇರುತ್ತಾರೆ . ನಮ್ಮ ಅಜ್ಜ ನಿಂಗಪ್ಪರವರು ಅವರ ಮಕ್ಕಳ ನಡುವೆ ಆದ ಪಾಲುವಿಭಾಗ ತೋರಿಸಲು ಈಗ ನನ್ನ ಬಳಿ ದಾಖಲೆಗಳು ಇರುವುದಿಲ್ಲ . ನಮ್ಮ ವಾದ ಪತ್ರದಲ್ಲಿ ವಾದಿ 1 ರವರಿಗೆ ತವರು ಮನೆಯಿಂದ ಬಂದಿರುವ ಆಸ್ತಿಗಳ ಬಗ್ಗೆ ನೊಂದಾಯಿತ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿ ಮತ್ತೊಂದು ದಾವಾ ಸಂಖ್ಯೆ 66/2018 ರಲ್ಲಿ ಹಾಜರುಪಡಿಸಿರುತ್ತೆವೆ ಎಂದು ಹೇಳುತ್ತಾರೆ . ನಿಪಿ 1 ದಾಖಲೆಯು ದಾವಾ ಆಸ್ತಿ ಐಟಂ 1 ಸಂಬಂದಿಸಿದ ದಾಖಲೆ ಇರುತ್ತದೆ ಎಂದರೆ ಸರಿ. ಸದರಿ ದಾಖಲೆಯಲ್ಲಿ 02 ಎಕರೆ ವಿಸ್ತೀರ್ಣ ಇದ್ದು ಜಿ ಮಲ್ಲಿಕಾರ್ಜುನಪ್ಪ ಬಿನ್ ಲಿಂಗಪ್ಪ ಇವರ ಹೆಸರಿನಲ್ಲಿ ಖಾತೆ ಇರುತ್ತದೆ ಎಂದರೆ ಸರಿ. ಜಿ ಮಲ್ಲಿಕಾರ್ಜುನ್ ಅವರಿಗೆ ಎಂ.ಆರ. 9/1984-85 ರಂತೆ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ಸರಿ. ಸದರಿ ದಾಖಲೆಗಳನ್ನು ನಾನು ಹಾಜರುಪಡಿಸಿರುತ್ತೇನೆ . ನಾನು ಈ ದಾವೆಗೆ ಯಾವ ದಾಖಲೆಗಳನ್ನು ಹಾಜರುಪಡಿಸಿರುವ ಬಗ್ಗೆ ವಕೀಲರಿಂದ ಕೇಳಿ ತಿಳಿದುಕೊಂಡಿರುತ್ತೇನೆ . ನಿಪಿ 5 ಪಹಣಿಯಲ್ಲ್ಲಿ ದಾವಾ ಆಸ್ತಿ ಐಟಂ 2 ರಲ್ಲಿ ಮಲ್ಲಿಕಾರ್ಜುನಪ್ಪ ತಂದೆ ಲಿಂಗಪ್ಪ ಅವರ ಹೆಸರಿಗೆ ಖಾತೆ ಇದ್ದು ಎಂ. ಆರ್.90/1983-84 ರಂತೆ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ಸರಿ. ಸದರಿ ಎಂ. ಆರ್ . 90/1983-84 ಅನ್ನು ನಿಪಿ 8 ರಂತೆ ಹಾಜರುಪಡಿಸಿರುತ್ತೇನೆ . ದಾವಾ ಆಸ್ತಿ ಐಟಂ 2 ರ ಒಟ್ಟು ವಿಸ್ತೀರ್ಣ 9 ಎಕರೆ 07 ಗುಂಟೆ ಇದ್ದು 08 ಗುಂಟೆ ಖರಾಬು ಬಿಟ್ಟು ಉಳಿದ 08 ಎಕರೆ 39 ಗುಂಟೆ ಇರುತ್ತದೆ ಎಂದರೆ

ಸರಿ. ನಿಪಿ 7 ರಲ್ಲಿ ಸರ್ವೆ ನಂ. 9/2 ಪಿ ಪಹಣಿಯಲ್ಲಿ ಒಟ್ಟು 02 ಎಕರೆ ವಿಸ್ತೀರ್ಣ 08 ಗುಂಟೆ ಖರಾಬು ಬಿಟ್ಟು 01 ಎಕರೆ 32 ಗುಂಟೆ ಉಳಿದ ಆಸ್ತಿ ನಮೂದು ಇರುತ್ತದೆ ಎಂದರೆ ಸರಿ. ನಿಪಿ 7 ರಲ್ಲಿ ಇರುವ 2 ಎಕರೆ ಆಸ್ತಿಯು ನಮ್ಮ ತಂದೆ ಮರಣಾನಂತರ 9/4 ಎಂದು ಪೋಡಿಕರಣ ಆಗಿ ವಾದಿ 1 ಮತ್ತು ಪ್ರತಿವಾದಿ 1 ರವರ ಹೆಸರಿಗೆ ಜಂಟಿ ಖಾತೆ ಆಗಿರುತ್ತದೆ ಎಂದರೆ ಸಾಕ್ಷಿ ವಾದಿ 1 ರವರಿಗೆ ತಿಳಿಯದೆ ಪ್ರತಿವಾದಿ ಮಾಡಿಸಿಕೊಂಡಿರುತ್ತಾರೆ ಎಂದು ಹೇಳುತ್ತರೆ . ಕಂದಾಯ ಇಲಾಖೆಯಲ್ಲಿ ಯಾರು ಖಾತಾ ಬದಲಾವಣೆ ಮಾಡಲು ಇಚ್ಚಿಸುತ್ತಾರೆ ಅವರಿಂದ ಅರ್ಜಿಯನ್ನು ಪಡೇದುಕೊಂಡು ಖಾತೆ ಬದಲಾವಣೆ ಮಾಡುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆಸಿ ನಮಗೆ ಅರ್ಜಿ ಸಿಕ್ಕಿರುವುದಿಲ್ಲ ಎಂದು ಹೇಳುತ್ತಾರೆ . ಸರ್ಕಾರಿ ಅಧಿಕಾರಿಗಳಾದ ಕಂದಾಯ ಇಲಾಖಿಯವರು ಖಾತಾ ಬದಲಾವಣೆ ಅರ್ಜಿ ಬದಲಾವಣೆ ಪಡೇದ ನಂತರ ಗ್ರಾಮದ ಚಾವಡಿಯಲ್ಲಿ ಪ್ರಕಟಣೆ ಹೋಡಿಸುತ್ತಾರೆ ಎಂದರೆ ಸರಿ. ಪ್ರಕಟಣೆ ಆದ ನಂತರ ಸಾರ್ವಜನಿಕರಿಂದ ಯಾವುದೇ ತಕರಾರು ಅರ್ಜಿಗಳು ಸಲ್ಲಿಸದೆ ಇರುವ ಕಾರಣ ಅರ್ಜಿಯನ್ನು ಅಂಗೀಕರಿಸುತ್ತಾರೆ ಎಂದರೆ ಸರಿ.

(ಪ್ರತಿವಾದಿ ವರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಆಲಿಸಿ ಸಮಯ ನೀಡಲಾಯಿತು )

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ

ಸಹಿ/-

ಸಿವಿಲ್ ನ್ಯಾಯಾಧೀಶರು, ಜಗಳೂರು